## ಮಲದ ಗುಂಡಿಯಲ್ಲಿ ಸತ್ತವರೆಷ್ಟು?

ಮಲದ ಗುಂಡಿ, ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಪಡಿಸುವಾಗ ಉಸಿರುಗಟ್ಟಿ ಸತ್ತವರ ಸಂಖ್ಯೆಯಾದರೂ ನಿಖರವಾಗಿದೆಯೇ? ಒಂದೊಂದು ವರದಿ, ದಾಖಲೆ ಒಂದೊಂದು ಅಂಕಿಅಂಶ ಮುಂದಿಡುತ್ತದೆ. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಂಕಿಅಂಶದ ಪ್ರಕಾರ 1993ರ ನಂತರ ಒಳಚರಂಡಿಯಲ್ಲಿ ಕೆಲಸ ಮಾಡುವಾಗ ಸತ್ತವರ ಸಂಖ್ಯೆ 608 (Sewer Deaths). ತಮಿಳು ನಾಡಿನಲ್ಲಿ ಅತಿಹೆಚ್ಚು (194) ಮತ್ತು ಎರಡನೇ ಸ್ಥಾನದಲ್ಲಿ ಗುಜರಾತ್ (122) ಇದೆ. ವ್ಯಂಗ್ಯ ನೋಡಿ, ಗುಜರಾತಿನಲ್ಲಿ ಮಲದ ಗುಂಡಿ ಸ್ವಚ್ಛಪಡಿಸುವ ಕುಟುಂಬಗಳು ಕೇವಲ 2 ಎಂದು 2011ರ ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿಯು ಹೇಳುತ್ತದೆ. ಹಾಗಿದ್ದರೆ ಸತ್ತ 122 ಜನರು ಯಾರು?

1993ರಿಂದ ಎಷ್ಟು ಜನ ಸತ್ತಿದ್ದಾರೆ ಎಂದು ಪಟ್ಟಿ ಸಿದ್ಧಪಡಿಸಿ, 10 ಲಕ್ಷ ರೂಪಾಯಿ ಪರಿಹಾರ ಕೊಡುವಂತೆ ಸುಪ್ರೀಂ ಕೋರ್ಟ್ 2014ರಲ್ಲಿಯೇ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ. ಈವರೆಗೆ ಅಂಥದೊಂದು ಪಟ್ಟಿ ಸಿದ್ಧಪಡಿಸಿ, ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ? ಈ ಕುರಿತು ಮಾರ್ಚ್ 2018ರಂದು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಕೊಟ್ಟ ಸರ್ಕಾರಿ ಉತ್ತರದ ಪ್ರಕಾರವೇ – ಕರ್ನಾಟಕವೂ ಸೇರಿದಂತೆ ಏಳು ರಾಜ್ಯಗಳಲ್ಲಿ 323 ಜನರು ಗುಂಡಿ ಸ್ವಚ್ಛಪಡಿಸುವಾಗ ಸತ್ತಿದ್ದು, ಅವರಲ್ಲಿ 204 ಜನರಿಗೆ 10 ಲಕ್ಷ ಪರಿಹಾರ 47 ಜನರಿಗೆ ಭಾಗಶಃ ಪರಿಹಾರ ನೀಡಲಾಗಿದೆ. 72 ಜನರಿಗೆ ಯಾವುದೇ ಪರಿಹಾರ ನೀಡಿಲ್ಲ. ತಮಿಳುನಾಡಿನಲ್ಲಿ ಸತ್ತ 144 ಜನರಲ್ಲಿ 141 ಜನರಿಗೆ ಮತ್ತು ಪಂಜಾಬ್‌ನಲ್ಲಿ ಸತ್ತ 32ರಲ್ಲಿ ಅಷ್ಟೂ ಜನರಿಗೆ ಪೂರ್ಣ ಪರಿಹಾರ ನೀಡಲಾಗಿದೆ. ಈ ಎರಡು ರಾಜ್ಯಗಳನ್ನು ಹೊರತುಪಡಿಸಿದರೆ ಇನ್ನಾವ ರಾಜ್ಯದಲ್ಲಿಯೂ ಮಲದ ಗುಂಡಿಯಲ್ಲಿ ಸತ್ತಿದ್ದಾರೆ ಎಂದು ಸರ್ಕಾರವೇ ಒಪ್ಪಿಕೊಂಡ ಜನರಿಗೂ ಪೂರ್ಣ ಪರಿಹಾರ ನೀಡಿಲ್ಲ. ಕರ್ನಾಟಕದಲ್ಲಿ ಕೂಡ ಸೆಪ್ಟಿಕ್ ಟ್ಯಾಂಕ್ ಮತ್ತು ಚರಂಡಿ ಗುಂಡಿಗಳಲ್ಲಿ ಬಿದ್ದು ಸತ್ತ 59 ಜನರಲ್ಲಿ ಕೇವಲ 14 ಜನರಿಗೆ ಪೂರ್ಣ ಪರಿಹಾರ ನೀಡಲಾಗಿದೆ.

ಬೇಜವಾಡ ವಿಲ್ಸನ್ ಹೇಳುವಂತೆ 2016–2018ರ ನಡುವೆ ರಾಜಧಾನಿ ದೆಹಲಿ ನಗರವೊಂದರಲ್ಲಿಯೇ 429 ಜನರು ಸತ್ತಿದ್ದಾರೆ. ಹಾಗಿದ್ದರೆ ಇಡೀ ದೇಶದಲ್ಲಿ ಎಷ್ಟು ಜನರು ಸತ್ತಿರಬಹುದು?

ಮಲದ ಗುಂಡಿಯಲ್ಲಿ ಉಸಿರುಗಟ್ಟಿ ಸತ್ತ ಎಷ್ಟೋ ಪ್ರಕರಣಗಳು ವರದಿಯಾಗುವುದೇ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಮಾಧ್ಯಮಗಳ ಆಸಕ್ತಿಯಿಂದ ವರದಿಯಾಗುತ್ತಿವೆ ಎಂಬುದನ್ನು ಬಿಟ್ಟರೆ ಈ ಹಿಂದೆ ನಡೆದ ನೂರಾರು ಪ್ರಕರಣಗಳನ್ನು ಅಲ್ಲಲ್ಲಿಯೇ ವ್ಯವಸ್ಥಿತವಾಗಿ ಮುಚ್ಚಿಹಾಕಲಾಗಿದೆ. ಸಫಾಯಿ ಕರ್ಮಚಾರಿ ಆಂದೋಳನದ ಅಂಕಿಅಂಶಗಳ ಪ್ರಕಾರ ಈ ವರೆಗೆ 1760 ಜನರು ಮಲದ ಗುಂಡಿಯಲ್ಲಿ ಕೆಲಸ ಮಾಡುವಾಗ ಸತ್ತಿದ್ದಾರೆ.

ಉಸಿರಾಟದ ಸಮಸ್ಯೆಗಳು, ಕೆಮ್ಮು, ಕಫ, ಬೆನ್ನು ಮತ್ತು ಭುಜ ನೋವು ಎಡೆಬಿಡದೆ ಬಾಧಿಸುತ್ತವೆ. ಕೆಲಸಕ್ಕೆ ಹೋಗುವಾಗ ಹೆಚ್ಚಾಗಿ ಖಾಲಿಹೊಟ್ಟೆಯಲ್ಲಿ ಹೋಗುತ್ತಾರೆ. ಮರಳಿ ಬಂದ ನಂತರ ಎಷ್ಟು ತೊಳೆದರೂ ಆ ವಾಸನೆ, ಗಲೀಜು ಕೈಯಲ್ಲಿಯೇ ಉಳಿಕೊಂಡು ವಾಕರಿಕೆಯೆನ್ನಿಸಿ ಊಟ ಸರಿಯಾಗಿ ಸೇರುವುದಿಲ್ಲ. ಸರಿಯಾದ ಪೌಷ್ಟಿಕ ಆಹಾರವಿಲ್ಲದೇ, ಮೂಳೆಚಕ್ಕಳವಷ್ಟೇ ಎದ್ದು ಕಾಣುವ ಇವರು ಅಕಾಲ ವೃದ್ಧಾಪ್ಯಕ್ಕೆ ತುತ್ತಾಗುತ್ತಾರೆ. ಕೈಯಿಂದ ಮಲ ಎತ್ತಿ ಬುಟ್ಟಿಯಲ್ಲಿ ಬಾಚಿಕೊಂಡು ಹೋಗುವ ಹೆಣ್ಣುಮಕ್ಕಳಿಗೆ ಹೆಚ್ಚಿನ ವೇಳೆ ಗರ್ಭಪಾತ, ರಕ್ತಹೀನತೆ ಸಾಮಾನ್ಯ. ಮಲದಗುಂಡಿ ಮತ್ತು ಚರಂಡಿ ಗುಂಡಿಗಳಲ್ಲಿ ಇಳಿದು ಹೊಲಸು ಎತ್ತುವವರು ಗಂಡಸರು, ಆದರೆ ಒಣ ಪಾಯಿಖಾನೆಗಳಿಂದ ಮಲ ಬಾಚುವವರು ಮತ್ತು ಗುಂಡಿಯಿಂದ ಮೇಲೆತ್ತಿ ಹಾಕಿದ್ದನ್ನು ಸ್ವಚ್ಛಪಡಿಸುವವರು ಹೆಣ್ಣುಮಕ್ಕಳು. ಆ ಅರ್ಥದಲ್ಲಿ ಮಲ ಬಾಚುವ ದಲಿತ ಹೆಣ್ಣುಮಕ್ಕಳು ಎರಡು ಬಗೆಯ ಅಸಮಾನತೆಯನ್ನು, ದೌರ್ಜನ್ಯವನ್ನು ಎದುರಿಸುತ್ತಾರೆ. ಬಿಸಿಲಿರಲಿ, ಮಳೆಯಿರಲಿ, ಬಿದಿರಿನ ಬುಟ್ಟಿ ಅಥವಾ ಬಕೇಟುಗಳಲ್ಲಿ ಮಲ ತುಂಬಿಸಿಕೊಂಡು, ಊರ ಹೊರಗೆ ಹೊತ್ತೊಯ್ದು ಹಾಕಿಬರಬೇಕು. ಇಷ್ಟು ಮಾಡಿದ್ದಕ್ಕೆ ವರ್ಷಕ್ಕೆರಡು ಸಲ 8–10 ಕೆ.ಜಿ. ಧಾನ್ಯ, ಆಗೀಗ ಹಳಸಿದ ಅನ್ನ, ಒಂದೆರಡು ರೊಟ್ಟಿ ತುಣುಕು ಕೊಟ್ಟರೆ ಹೆಚ್ಚು. ಮತ್ತೆ ಈ ಯಾರಿಗೂ ಯಾವುದೇ ರೀತಿಯ ಆರೋಗ್ಯ ವಿಮೆ ಇಲ್ಲ.

### ವಿಲ್ಸನ್ ಎನ್ನುವ ಬೆಳ್ಳಿಗೆರೆ

ಈ ಸಮುದಾಯದಲ್ಲಿ ಒಬ್ಬರಾಗಿ ಬಾಲ್ಯದಿಂದ ಈ ಕೆಲಸ ಮಾಡುವವರ ಕಿತ್ತುತಿನ್ನುವ ಬಡತನ,



ಸಮಾಜದ ದೌರ್ಜನ್ಯ, ಅಸ್ಪೃಶ್ಯತೆ ಎಲ್ಲವನ್ನು ಅನುಭವಿಸಿರುವ ಬೇಜವಾಡ ವಿಲ್ಸನ್ ಭಾರತದಲ್ಲಿ 'ಸಫಾಯಿ ಕರ್ಮಚಾರಿ ಆಂದೋಲನ' ಹುಟ್ಟುಹಾಕಿದವರು. ಎಂಬತ್ತರ ದಶಕದ ಕೊನೆಯಿಂದ ಅವರ ಕಾನೂನು ಹೋರಾಟ ಚಾಲ್ತಿಯಲ್ಲಿದೆ.

1993ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ 'ಮಲ ಬಾಚುವವರ ಉದ್ಯೋಗ ಮತ್ತು ಒಣ ಪಾಯಿಖಾನೆಗಳ ನಿರ್ಮಾಣ (ನಿಷೇಧ) ಕಾಯಿದೆ'ಯನ್ನು ಜಾರಿಗೆ ತರಲಾಯಿತು. ಈ ಕಾಯಿದೆಲ್ಲಿದ್ದ ತೊಡಕು ಎಂದರೆ ಮಲ ಬಾಚುವವರು (ಮ್ಯಾನ್ಯುವಲ್ ಸ್ಕಾವೆಂಜರ್ಸ್) ಎಂದರೆ ಕೇವಲ ಒಣ ಪಾಯಿಖಾನೆಗಳನ್ನು ಸ್ವಚ್ಛಪಡಿಸುವವರು ಮಾತ್ರ. ಚರಂಡಿ ಗುಂಡಿ ಅಥವಾ ಮ್ಯಾನ್‌ಹೋಲ್ ಮತ್ತು ಸೆಪ್ಟಿಕ್ ಟ್ಯಾಂಕುಗಳನ್ನು ಸ್ವಚ್ಛಪಡಿಸುವವರು, ರೈಲ್ವೆ ಟ್ರಾಕಿನ ಮೇಲಿನ ಮಲ ಬಾಚುವವರನ್ನು ಈ ಕಾಯಿದೆಯಲ್ಲಿ ಮಲ ಬಾಚುವವರು ಎಂದು ಪರಿಗಣಿಸಲೇ ಇಲ್ಲ. ಈ ಬಗ್ಗೆ ಬೇಜವಾಡ ವಿಲ್ಸನ್ ಮತ್ತೆ ಸುದೀರ್ಘ ಕಾನೂನು ಸಮರ ನಡೆಸಿದರು. 2013ರಲ್ಲಿ 'ಸಫಾಯಿ ಕರ್ಮಚಾರಿ ಉದ್ಯೋಗದ ನಿಷೇಧ ಮತ್ತು ಅವರ ಪುನರ್ವಸತಿ ಕಾಯಿದೆ' ಜಾರಿಯಾಯಿತು. ಇದರಡಿಯಲ್ಲಿ ಚರಂಡಿಗುಂಡಿ, ಕಕ್ಕಸುಗುಂಡಿ, ರೈಲ್ವೆ ಟ್ರ್ಯಾಕ್ ಮೇಲಿನ ಮಲ ಮತ್ತು ಎಲ್ಲ ಬಗೆಯ ಒಣ ಅಥವಾ ಇನ್‌ಸ್ಯಾನಿಟರಿ ಪಾಯಿಖಾನೆಗಳನ್ನು ಕೈಯಿಂದ ಬಾಚುವ, ತೆಗೆದುಕೊಂಡು ಹೋಗುವ ಅಥವಾ ಯಾವುದೇ ರೀತಿಯಲ್ಲಿ ಅದು ಗೊಬ್ಬರವಾಗುವ ಮುಂಚೆಯೇ ಸಾಗಿಸುವ ಉದ್ಯೋಗಕ್ಕೆ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ ಮತ್ತು ಹಾಗೆ ನೇಮಿಸಿಕೊಂಡಿದ್ದು ಕಂಡುಬಂದಲ್ಲಿ ಅದು Cognizable ಜಾಮೀನುರಹಿತ ಅಪರಾಧವಾಗುತ್ತದೆ. ಹಾಗಾದರೆ, ಈವರೆಗೆ ಈ ಕಾನೂನಿನ ಅಡಿಯಲ್ಲಿ ಒಬ್ಬರನ್ನಾದರೂ ಬಂಧಿಸಲಾಗಿದೆಯೇ? ಇಲ್ಲ. ಹಾಗೆಂದು ಮಲದ ಗುಂಡಿಗಳನ್ನು ಸ್ವಚ್ಛಪಡಿಸಲೆಂದು ಗುಂಡಿಯ ಒಳಗೆ ಈ ಸಮುದಾಯದವರನ್ನು ಇಳಿಸುವುದು ನಿಂತಿದೆಯೇ? ಅದೂ ಇಲ್ಲ.

ಮೇಲ್ನೋಟಕ್ಕೆ ಕಾಯಿದೆ ಜಾರಿಯಾಗಿದೆ. ನಗರಸಭೆ, ಪುರಸಭೆ ಅಥವಾ ಜಲಮಂಡಳಿಗಳು ಸಕ್ಕಿಂಗ್ ಯಂತ್ರಗಳನ್ನು ಬಳಸುತ್ತವೆ ಎಂದೇನೋ ಹೇಳುತ್ತಾರೆ. ಆದರೆ ಗುಂಡಿಗಳಲ್ಲಿ ಗಟ್ಟಿಗೊಂಡ ಹೊಲಸನ್ನು ಮೇಲೆತ್ತಿ ಹಾಕಲು ಮತ್ತೆ ತೋಟಿ